ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	785 (475)
ವಿಧಾನ ಪರಿಷತ್ ಸದಸ್ಯರ ಹೆಸರು	:	ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವವರು	:	ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು
ಉತ್ತರಿಸುವ ದಿನಾಂಕ	:	10.03.2020

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ಹಿಂದುಳಿದ ಜಿಲ್ಲೆಯಾದ ಬೀದರ್ ಭಾಗದ ಅಭಿವೃದ್ಧಿಗಾಗಿ ವಾಣಿಜ್ಯ ಮತ್ತು ಕೈಗಾರಿಕೆ ಬೆಳೆಸುವ ಯೋಜನೆಗಳು ಸರ್ಕಾರದ ಮುಂದಿದೆಯೇ;	2018–19ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಲಾದ "ಕಾಂಪೀಟ್ ವಿತ್ ಚೈನಾ" ಯೋಜನೆಯಡಿ ಬೀದರ್ ಜಿಲ್ಲೆಯಲ್ಲಿ ಕೃಷಿ ಉಪಕರಣ ಉತ್ಪಾದನಾ ಕ್ಲಸ್ಟರ್ ಸ್ಥಾಪಿಸುವ ಬಗ್ಗೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಗುರುತಿಸಲಾದ ವಲಯದ ಪ್ರಮುಖ ಕೈಗಾರಿಕೋದ್ಯಮಿಗಳನ್ನು ಒಳಗೊಂಡ ವಿಷನ್ ಗ್ರೂಪ್ ಸ್ಥಾಪಿಸಲಾಗಿದೆ. ಸದರಿ ಕ್ಲಸ್ಟರ್ ಸ್ಥಾಪಿಸಲು ಅವಶ್ಯವಿರುವ ಮೂಲಭೂತ ಸೌಕರ್ಯ, ವಿಶೇಷ ರಿಯಾಯಿತಿ ಮತ್ತು ಪ್ರೋತ್ಸಾಹಗಳು ಹಾಗೂ ತರಬೇತಿ ಅವಶ್ಯಕತೆಗಳ ಬಗ್ಗೆ ವಿಷನ್ ಗ್ರೂಪ್ ಸಭೆಗಳಲ್ಲಿ ಚರ್ಚಿಸಲಾಗುತ್ತಿದ್ದು ಅಂತಿಮ ವರದಿ ನಿರೀಕ್ಷೆಯಲ್ಲಿದೆ. ಹಾಲಿ ಕೃಷಿ ಉಪಕರಣ ತಯಾರಿಕೆಯ ವಿವಿಧ ಕಂಪನಿಗಳೊಂದಿಗೆ ಬಂಡವಾಳ ಹೂಡಿಕೆ ಬಗ್ಗೆ ಚರ್ಚಿಸಲಾಗುತ್ತಿದ್ದು, ಈವರೆಗೂ ಯಾವುದೇ ಪ್ರಸ್ತಾವನೆ ಅಂತಿಮಗೊಂಡಿರುವುದಿಲ್ಲ. ಮುಂದುವರಿದಂತೆ, ಬಂಡವಾಳ ಆರ್ಕಷಿಸಲು ದೇಶದ ಪ್ರಮುಖ ನಗರಗಳಾದ ಮುಂಬೈ, ಹೈದರಾಬಾದ್ ನಗರಗಳಲ್ಲಿ ರೋಡ್ ಶೋ / ಸಭೆಗಳನ್ನು ನಡೆಸಲಾಯಿತು. ದಿನಾಂಕ 14.02.2020ರಲ್ಲಿ ಹುಬ್ಬಳ್ಳಿಯಲ್ಲಿ ಇನ್ವೆಸ್ಟ್ ಕರ್ನಾಟಕ ಸಮಾವೇಶ ಏರ್ಪಡಿಸಲಾಗಿರುತ್ತದೆ. ಈ ಸಮಾವೇಶದಲ್ಲಿ ಕೃಷಿ ಉಪಕರಣ ವಲಯದಲ್ಲಿ 2 ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.
(ಆ)	ಬಂದಿದ್ದಲ್ಲಿ ಆ ಯೋಜನೆಗಳು ಯಾವುವು; ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?	ಹುಬ್ಬಳ್ಳಿಯಲ್ಲಿ ನಡೆದ ಇನ್ವೆಸ್ಟ್ ಕರ್ನಾಟಕ ಸಮಾವೇಶದಲ್ಲಿ ಕೃಷಿ ಉಪಕರಣ ವಲಯದಲ್ಲಿ 2 ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ವಿವರಗಳ ಪಟ್ಟಿಯನ್ನು **ಅನುಬಂಧ–1** ರಲ್ಲಿ ಲಗತ್ತಿಸಿದೆ.

ಸಿಐ 52 ಎಸ್‌ಪಿಐ 2020

(ಜಗದೀಶ್ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

ಅನುಬಂಧ-1

MOU List of Bidar

Sl.No	Company name	State	State	Sector	Investment	Employment
1	K N Farm Equipments Pvt. Ltd Sy.no.487, Bachupally (V), Quthbullapur, RR Dist, Hyderabad-500072., Works at Sy.394, Kallakal (V), Medak District, Hyderabad – 502336.	Telangana, India	Bidar	AGRI IMPLIMENTS	100.00	400
2	Krushiseva Agro Engineering Works., 3rd floor, Agro Business Centre (ABC), near Indira Training School, Shinde Chowk, Solapur, Maharashtra, 413007.	Maharashtra, India	BASAVAKAYAN, Bidar	AGRI IMPLEMENTS	15.00	200
	Total				150	600